| | | | |
|---|---|---|---|
| **PUBLICATION** | Sanjevani | **DATE** | 10.02.2019 |
| **EDITION** | Bangalore | **PAGE NO** | 08 |
| **HEADLINE** | Ultimate aim of Education is not Employment, but Empowerment & Enlightenment, says Honourable Vice President of India, M. Venkaiah Naidu | | |



ನಗರದ ಸಿ.ಎಂ.ಆರ್.ವಿಶ್ವ ವಿದ್ಯಾಲಯ ನಿರ್ಮಿಸಿರುವ ವಸತಿ ನಿಲಯದ ನೂತನ ಬ್ಲಾಕ್ ಅನ್ನು ಉಪ ರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಉದ್ಘಾಟಿಸಿದರು. ಸಿ.ಎಂ.ಆರ್. ವಿವಿ ಕುಲಪತಿ ಡಾ.ಸಬೀತಾ ರಾಮಮೂರ್ತಿ ಡಾ.ಕೆ.ಸಿ.ಗೋಪಾಲ ಕೃಷ್ಣ ಮತ್ತಿತರರು ಭಾಗವಹಿಸಿದ್ದರು.

# ಶಿಕ್ಷಣಕ್ಕೆ ಉದ್ಯೋಗದ ಗುರಿ ಬೇಡ – ವೆಂಕಯ್ಯನಾಯ್ಡು

ಬೆಂಗಳೂರು, ಫೆ. 10– ಜೀವನದಲ್ಲಿ ಬರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಶಿಕ್ಷಣ ಬಳಕೆಯಾಗಬೇಕೇ ಹೊರತು ಉದ್ಯೋಗದ ಉದ್ದೇಶ ಹೊಂದಿರಬಾರದೆಂದು ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಹೇಳಿದರು.

ಅವರು ಸಿಎಂಆರ್ ವಿಶ್ವವಿದ್ಯಾನಿಲಯ ವಸತಿ ನಿಲಯದ ನೂತನ ಬ್ಲಾಕ್‌ನ್ನು ಉದ್ಘಾಟಿಸಿ ಮಾತನಾಡಿದರು.

ಉದ್ಯೋಗ ಪಡೆಯುವ ಉದ್ದೇಶಕ್ಕೆ ಶಿಕ್ಷಣವನ್ನು ಸೀಮಿತಗೊಳಿಸಬಾರದು. ನಾವು ಪಡೆಯುವ ಶಿಕ್ಷಣದಿಂದ ಉದ್ಯೋಗ ಸೃಷ್ಟಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಎಂದ ಅವರು, ಪ್ರತಿ ಶಿಕ್ಷಣ ಸಂಸ್ಥೆ ಪ್ರಾಥಮಿಕ ಶಿಕ್ಷಣ ಗುಣಮಟ್ಟಕ್ಕೆ ಹೆಚ್ಚು ಆದ್ಯತೆ ನೀಡಬೇಕು ಎಂದರು.

ಭಾರತದ ಶಿಕ್ಷಣ ವ್ಯವಸ್ಥೆ ಇಂದು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಭಾರತ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾಗಬೇಕೆನ್ನುವ ತಜ್ಞರ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಶಿಕ್ಷಣ ಸಂಸ್ಥೆಗಳು ಶಿಕ್ಷಣದೊಂದಿಗೆ ಕೌಶಲ್ಯಾಭಿವೃದ್ಧಿಯತ್ತ ಹೆಚ್ಚು ಗಮನ ಹರಿಸಬೇಕು. ಕೌಶಲ್ಯಾಭಿವೃದ್ಧಿ, ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ಶಿಕ್ಷಣದ ವ್ಯವಸ್ಥೆಯಲ್ಲಿ ಶೇ. 50 ರಷ್ಟು ಪಠ್ಯಕ್ರಮಗಳಿಗೆ ಆದ್ಯತೆ ನೀಡಿದರೆ ಉಳಿದ ಶೇ. 50 ರಷ್ಟು ದೈಹಿಕ ಶಿಕ್ಷಣಕ್ಕೆ ಮೀಸಲಿಡಬೇಕು. ಸದೃಢವಾದ ಶರೀರವಿದ್ದರೆ ಎಲ್ಲಾ ಸಾಧನೆಗೆ ಸಹಕಾರವಾಗಲಿದೆ ಎಂದರು.

ಇದೇ ನಿಟ್ಟಿನಲ್ಲಿ ಭಾರತದ ಯೋಗಪದ್ಧತಿ ವಿಶ್ವದ ಗಮನ ಸೆಳೆದಿವೆ. ವಿದೇಶಗಳಲ್ಲೂ ಇಂದು ಯೋಗಾಭ್ಯಾಸಕ್ಕೆ ಹೆಚ್ಚು ಆದ್ಯತೆ ದೊರೆಯುತ್ತಿವೆ.

ನಮ್ಮ ನಮ್ಮ ಪರಿಸರಕ್ಕೆ ಅನುಗುಣವಾಗಿ ದೊರೆಯುವ ಆಹಾರ ಪದ್ಧತಿಯನ್ನು ಅನುಸರಿಸಬೇಕು. ಪಾಶ್ಚಿಮಾತ್ಯ ಆಹಾರ ಪದ್ಧತಿಯಿಂದ ನಮ್ಮ ಆರೋಗ್ಯ ಸಂರಕ್ಷಣೆ ಸಾಧ್ಯವಿಲ್ಲ ಎಂದರು.

ಇಂದು ದೇಶದ ಶಿಕ್ಷಣ ವ್ಯವಸ್ಥೆ ಬದಲಾಗಿದೆ. ಲಿಂಗಸಮಾನತೆ ಸೃಷ್ಟಿಯಾಗಿದೆ. ಅನಾದಿ ಕಾಲದಿಂದಲೂ ಭಾರತದಲ್ಲಿ ಮಹಿಳೆಯನ್ನು ಗೌರವಿಸಿಕೊಂಡೆ ಬರಲಾಗುತ್ತಿದೆ ಎಂದರು.

ಯುವಕರು ಮುಖ್ಯವಾಗಿ ತಾಯಿ– ತಂದೆ, ಜನ್ಮಭೂಮಿ, ಮಾತೃಭಾಷೆ, ದೇಶ ಪ್ರೇಮ ಹಾಗೂ ಗುರುವಿನ ಮೇಲಿನ ಭಕ್ತಿಯನ್ನು ಸದಾ ಕಾಯ್ದುಕೊಳ್ಳಬೇಕು ಎಂದರು.

ವೇದಿಕೆಯಲ್ಲಿ ಸಿಎಂಆರ್ ವಿವಿ ಯ ಕುಲಪತಿ ಡಾ. ಸಭೀತಾ ರಾಮಮೂರ್ತಿ, ಸಿಎಂಆರ್ ಶಿಕ್ಷಣ ವ್ಯವಸ್ಥೆ ಅಧ್ಯಕ್ಷ ಕೆ.ಸಿ. ರಾಮಮೂರ್ತಿ, ನ್ಯಾಷನಲ್ ಪಬ್ಲಿಕ್ ಶಾಲೆ ಅಧ್ಯಕ್ಷ ಡಾ.ಕೆ.ಪಿ. ಗೋಪಾಲಕೃಷ್ಣ ಹಾಗೂ ಇತರರು ಉಪಸ್ಥಿತರಿದ್ದರು.